ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1277
ಸದಸ್ಯರ ಹೆಸರು	ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್
ಉತ್ತರಿಸಬೇಕಾದ ದಿನಾಂಕ	26/02/2018
ಉತ್ತರಿಸುವ ಸಚಿವರು	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

* * * * *

ಕ್ರ ಸಂ	ವಿಷಯ	ಉತ್ತರ
ಅ)	ರಾಜ್ಯದ ಹಿಂದುಳಿದ ವರ್ಗ ಹಾಗೂ ಸಮಾಜ ಕಲ್ಯಾಣ ಇಲಾಖೆಗಳ ಹಾಸ್ಟೆಲ್‌ನಲ್ಲಿ ಖಾಲಿ ಇರುವ ವಾರ್ಡನ್, ಸಹಾಯಕ ವಾರ್ಡನ್, ಅಡುಗೆಗಾರರ ಹಾಗೂ ಸಹಾಯಕ ಅಡುಗೆಗಾರರ ಹುದ್ದೆಗಳೆಷ್ಟು;	**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಮಂಜೂರಾಗಿರುವ, ಭರ್ತಿಯಾಗಿರುವ ಹಾಗೂ ಖಾಲಿ ಇರುವ ನಿಲಯ ಪಾಲಕರು, ನಿಲಯ ಮೇಲ್ವಿಚಾರಕರು, ಕಿರಿಯ ನಿಲಯ ಮೇಲ್ವಿಚಾರಕರು, ಅಡುಗೆಯವರು ಹಾಗೂ ಅಡುಗೆ ಸಹಾಯಕರ ಹುದ್ದೆಗಳ ವಿವರ ಕೆಳಕಂಡಂತಿರುತ್ತದೆ.

ಕ್ರ ಸಂ	ಹುದ್ದೆಯ ಹೆಸರು	ಮಂಜೂರು	ಭರ್ತಿ	ಖಾಲಿ	ಭರ್ತಿಗೆ ಕ್ರಮ ವಹಿಸಿರುವ ಹುದ್ದೆಗಳು
1	ನಿಲಯ ಪಾಲಕರು	186	142	44	0
2	ನಿಲಯ ಮೇಲ್ವಿಚಾರಕರು	2241	1388	853	440
3	ಕಿರಿಯ ನಿಲಯ ಮೇಲ್ವಿಚಾರಕರು	307	296	11	11
4	ಅಡುಗೆಯವರು	5467	2176	3291	1547
5	ಅಡುಗೆ ಸಹಾಯಕರು	3384	807	2577	2470
	ಒಟ್ಟು	11585	**4809**	**6776**	**4468**

ಸಮಾಜ ಕಲ್ಯಾಣ ಇಲಾಖೆ

ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಲ್ಲಿ ಈ ಕೆಳಕಂಡಂತೆ ಹುದ್ದೆಗಳು ಖಾಲಿ ಇರುತ್ತದೆ.

ಕ್ರಸಂ.	ಹುದ್ದೆಯ ಹೆಸರು	ಖಾಲಿ ಹುದ್ದೆಗಳ ಸಂಖ್ಯೆ
1	ವಾರ್ಡನ್	663
2	ಜೂನಿಯರ್ ವಾರ್ಡನ್	09
3	ಅಡುಗೆಯವರು	1710
4	ಅಡುಗೆ ಸಹಾಯಕರು	1867

ಕ್ರ ಸಂ	ವಿಷಯ	ಉತ್ತರ
ಆ)	ಖಾಲಿ ಹುದ್ದೆ ಭರ್ತಿಗೆ ಕೈಗೊಂಡ ಕ್ರಮಗಳೇನು?	**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ನಿಲಯ ಮೇಲ್ವಿಚಾರಕರು, ಕಿರಿಯ ನಿಲಯ ಮೇಲ್ವಿಚಾರಕರು, ಅಡುಗೆಯವರು ಹಾಗೂ ಅಡುಗೆ ಸಹಾಯಕರ ಹುದ್ದೆಗಳ ಭರ್ತಿಗೆ ಕೈಗೊಳ್ಳಲಾಗಿರುವ ಕ್ರಮಗಳ ವಿವರ ಕೆಳಕಂಡಂತಿರುತ್ತದೆ. 1) 164 ನಿಲಯ ಮೇಲ್ವಿಚಾರಕರ ಹುದ್ದೆಗಳನ್ನು 2017 ನೇ ಸಾಲಿನಲ್ಲಿ ಭರ್ತಿ ಮಾಡಲಾಗಿದೆ. 440 ನಿಲಯ ಮೇಲ್ವಿಚಾರಕರ ಹುದ್ದೆ ಭರ್ತಿಗೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಕೆ. ಪಿ ಎಸ್ ಸಿ ಯಿಂದ ಹುದ್ದೆಗಳ ಭರ್ತಿಗೆ ದಿನಾಂಕ: 25/11/2017 ರಂದು ಅಧಿಸೂಚನೆ

		ಹೊರಡಿಸಲಾಗಿದೆ. 2) 296 ಕಿರಿಯ ನಿಲಯ ಮೇಲ್ವಿಚಾರಕರ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲಾಗಿದ್ದು, ಉಳಿದ 11 ಖಾಲಿ ಹುದ್ದೆಗಳಿಗೆ ಮುಂಬಡ್ತಿ ನೀಡಲು ಕ್ರಮ ವಹಿಸಲಾಗಿದೆ. 3) 2013 ರಿಂದ 2017 ರವರೆಗೆ ಅಡುಗೆಯವರು / ಅಡುಗೆ ಸಹಾಯಕರ 134 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, ಖಾಲಿ ಇರುವ 1547 ಅಡುಗೆಯವರು ಹಾಗೂ 2470 ಅಡುಗೆ ಸಹಾಯಕರ ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದು, ನೇಮಕಾತಿ ಆದೇಶ ನೀಡಬೇಕಿರುತ್ತದೆ. 4) ವಿದ್ಯಾರ್ಥಿ ನಿಲಯಗಳ ಸುಗಮ ನಿರ್ವಹಣೆ ದೃಷ್ಟಿಯಿಂದ ತಾತ್ಕಾಲಿಕವಾಗಿ ಅಡುಗೆಯವರು ಹಾಗೂ ಅಡುಗೆ ಸಹಾಯಕರ ಹುದ್ದೆಗಳಿಗೆ ಹೊರಸಂಪನ್ಮೂಲದಿಂದ ಸೇವೆಯನ್ನು ಪಡೆದು ನಿರ್ವಹಣೆ ಮಾಡಲಾಗುತ್ತಿದೆ. **ಸಮಾಜ ಕಲ್ಯಾಣ ಇಲಾಖೆ.** ಆರ್ಥಿಕ ಇಲಾಖೆ ಅನುಮೋದನೆ ನೀಡಿರುವಂತೆ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಗ್ರೂಪ್-ಸಿ ಮತ್ತು ಡಿ ವೃಂದದ ಹುದ್ದೆಗಳ ಭರ್ತಿಗಾಗಿ ಕೈಗೊಂಡಿರುವ ಕ್ರಮಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಹಿಂವಕ 75 ಬಿಇಟಿ 2018

(ಹೆಚ್. ಆಂಜನೇಯ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಮಾನ್ಯ ವಿಧಾನ ಪರಿಷತ್ ಸದಸ್ಯರು (ಶಿಕ್ಷಕರ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1277 ಕ್ಕೆ ಅನುಬಂಧ

ಕ್ರ ಸಂ.	ಹುದ್ದೆಯ ಹೆಸರು	ನೇರ ನೇಮಕಾತಿ / ಮುಂಬಡ್ತಿ	ನೇರ ನೇಮಕಾತಿಗಾಗಿ ಕ್ರಮ ವಹಿಸಿರುವ ಹುದ್ದೆಗಳ ಸಂಖ್ಯೆ	ಮುಂಬಡ್ತಿಗಾಗಿ ಕ್ರಮ ವಹಿಸಿರುವ ಹುದ್ದೆಗಳ ಸಂಖ್ಯೆ	ಷರಾ
1	ವಾರ್ಡನ್	ನೇರ ನೇಮಕಾತಿ	443	–	ಈ ಹುದ್ದೆಗಳನ್ನು ಭರ್ತಿ ಮಾಡಲು ಕೆ.ಪಿ.ಎಸ್.ಸಿ ಗೆ ಪ್ರಸ್ತಾವನೆ ಸಲ್ಲಿಸಲಾಗಿರುವ ಮೇರೆಗೆ, ಕೆಪಿಎಸ್‌ಸಿ ಯಿಂದ ಅಧಿಸೂಚನೆ ಸಂ: ಪಿಎಸ್‌ಸಿ 1/ಆರ್‌ಟಿ (ರ) ಬಿ–2/16 ದಿನಾಂಕ 22–10–2016 ರಲ್ಲಿ ಅಧಿಸೂಚನೆ ಹೊರಡಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ.
2	ಜೂನಿಯರ್ ವಾರ್ಡನ್	ಮುಂಬಡ್ತಿ	–	9	ಖಾಲಿ ಇರುವ 09 ಜೂನಿಯರ್ ವಾರ್ಡನ್ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡುವ ಹುದ್ದೆಗಳಾಗಿದ್ದು, ಬಡ್ತಿ ನೀಡಲು ಕ್ರಮವಹಿಸಲಾಗುವುದು.
3	ಅಡುಗೆಯವರು	ಮುಂಬಡ್ತಿ	–	1710	ಖಾಲಿ ಇರುವ ಹುದ್ದೆಗಳಿಗೆ ಅಡುಗೆ ಸಹಾಯಕರ ಹುದ್ದೆಯಿಂದ ಮುಂಬಡ್ತಿ ನೀಡಲು ಜಿಲ್ಲಾ ಹಂತದಲ್ಲಿ ಕ್ರಮ ವಹಿಸಲಾಗುತ್ತಿದೆ.
4	ಅಡುಗೆ ಸಹಾಯಕರು	ನೇರ ನೇಮಕಾತಿ	885	–	ಆರ್ಥಿಕ ಇಲಾಖೆ ಸಹಮತಿ ನೀಡಿರುವಂತೆ ಖಾಲಿ ಇರುವ 885–ಅಡುಗೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ದಿನಾಂಕ: 20–10–2016 ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಅದರಂತೆ ಎಲ್ಲಾ ಜಿಲ್ಲೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಆದೇಶ ಹೊರಡಿಸುವ ಅಂತಿಮ ಹಂತದಲ್ಲಿದೆ.

ಹಿಂವಕ 75 ಬಿಇಟಿ 2018

(ಎಸ್. ಎನ್. ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ–1,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.